ಸೌಕರ್ಯವಿಲ್ಲದಿದ್ದ ಕಾರಣ ಅವರು ಲಾರಿಯಲ್ಲಿ ಬರಬೇಕಾಗಿದ್ದರಿಂದ ಅವರು ಆ ಆಕ್ಸಿಡೆಂಟಿಗೆ ಸಿಕ್ಕ ಬೇಕಾಯಿತು. ಆದುದರಿಂದ ಅವರಿಗೆ ಅಲ್ಲಿ ವಸತಿ ಸೌಕರ್ಯಗಳನ್ನು ನಿರ್ಮಿಸಿ ಕೊಡುವಂತೆ ಮಾಡುವುದಕ್ಕೆ ಸರ್ಕಾರದವರು ಏನು ಕ್ರಮಗಳನ್ನು ಕೈಗೊಂಡಿದ್ದಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊಟ್ಟಮೊದಲನೆಯದಾಗಿ ಅಲ್ಲಿ 17 ಜನರು ಸತ್ತಿದ್ದಾರೆಂಬುದು ಸರಿಯಲ್ಲ. ಅಲ್ಲಿ 5 ಜನರು ಸತ್ತಿದ್ದಾರೆಂದೂ 15 ಜನರು ಗಾಯಗೊಂಡಿದ್ದು ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆಂದೂ ನನ್ನಲ್ಲಿ ವರದಿಯಿದೆ. ಆದುದರಿಂದ ಒಂದನೆಯದಾಗಿ ಅಲ್ಲಿ 17 ಜನರು ಸತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಲ್ಲ. ಇನ್ನು ಎರಡನೆಯದಾಗಿ—ಲಾರಿಯು ಮೈನ್ ರೋಡಿನಲ್ಲಿ ಹೋಗುತ್ತಿದ್ದಾಗ ಮೂರನೇ ಕರ್ವಿನಲ್ಲಿ ಡ್ರೈವರಿಗೆ ಕಂಟ್ರೋಲ್ ತಪ್ಪಿತು. ಆ ಲಾರಿಯಲ್ಲಿ ಸುಮಾರು 20—25 ಜನರು ಕುಳಿತಿದ್ದರು. ಮುಂದೆ ಕ್ಯಾಬಿನ್ನಿನಲ್ಲಿ 3 ಜನ ಡ್ರೈವರ್ ಮತ್ತು ಕಂಡಕ್ಟರ್ ಇಷ್ಟು ಜನರು ಕುಳಿತಿದ್ದರು. ಆ ಆಕ್ಸಿಡೆಂಟಿನಲ್ಲಿ ಐದು ಜನರು ಸತ್ತು 15 ಜನರು ಗಾಯಗೊಂಡರೆಂದು ತಿಳಿಸಬಯಸಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕಾರ್ಮಿಕರಿಗೆ ಪೋಲೀಸಿನವರಾಗಲಿ ಸರ್ಕಾರದವರಾಗಲಿ ಯಾರು ಪರಿಹಾರವನ್ನೇ ಕೊಡಿಸಿಲ್ಲ. ಕಾನೂನಲ್ಲಿ ಅವಕಾಶವಿದ್ದರೂ ಇಷ್ಟು ನಿಧಾನವಾಗುವುದಕ್ಕೆ ಏನು ಕಾರಣ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸತ್ತು ಹೋದವರು ಕಾರ್ಮಿಕರಾಗಲಿ ಯಾರೇ ಆಗಿರಲಿ ಶಾಸನದ ಪ್ರಕಾರ ಅವರ ಬಗ್ಗೆ ಏನು ಪರಿಹಾರ ಕೊಡಬೇಕೋ ಅದನ್ನು ಕೊಡಿಸುವುದಕ್ಕೆ ನೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—(ಎ) ಪ್ರಶ್ನೆಗೆ ಉತ್ತರವಾಗಿ "ಎಸ್" ಎಂದು ತಿಳಿಸಲಾಗಿದೆ. ಅಂದರೆ 8 ಜನ ಸತ್ತಿರುವುದನ್ನು ಮತ್ತು 15 ಜನರಿಗೆ ಗಾಯವಾಗಿರುವುದನ್ನು ಒಪ್ಪಿದಂತಾಯ್ತು ಆದರೆ ಈಗತಾನ್ 5 ಜನರು ಸತ್ತರು ಎಂದು ಹೇಳಿದರು. ಇದರಲ್ಲಿ ಯಾವುದು ಸರಿ?

9-30 P. M.

Sri H. M. CHANNABASAPPA.—Sorry, I stand corrected. Out of 8 people, five people died on the spot.

Election to the Ramanagaram Municipal Council

Sri B. PUTTASWAMAIAH (Ramanagaram).—

652. Will the Minister for Municipal Administration be pleased to state :—

(*a*) when the Ramanagaram Municipal Council election was held ;

(*b*) whether the High Court has ordered recently to conduct the election ;

(c) whether Government has implemented the Order of the High Court ;

(*d*) if not, the action taken by Government to conduct the election ?

Sri B. BASAVALINGAPPA (Minister for Municipal Administeration).—

(*a*) 3-5-1961.

(*b*) Yes.

(*c*) It is being implemented.

(*d*) This question does not arise.

ಶ್ರೀ ಬಿ. ಪುಟ್ಟಸ್ವಾಮಯ್ಯ—ರಾಮನಗರ ಪುರಸಭೆಯ ಚುನಾವಣೆಯು 3—5—1961 ರಲ್ಲಿ ಆಗಿ ಇಲ್ಲಿಗೆ 12 ವರ್ಷವಾಯ್ತು. 12 ವರ್ಷವಾದರೂ ಏಕೆ ಚುನಾವಣೆ ನಡೆಸಿಲಿಲ್ಲ ?

†ಶ್ರೀ ಬಿ. ಬಸವಲಿಂಗಪ್ಪ.—ಚುನಾವಣೆ 1961 ರಿಂದ ಇಲ್ಲಿಯವರೆಗೆ ಮುಂದುವರೆಯುವುದಕ್ಕೆ ಸರಕಾರ ಕಾರಣವಲ್ಲ, ರಾಮನಗರದ ನಿವಾಸಿಗಳು ಮತ್ತು ಪುರಸಭೆಯವರೇ ಇದಕ್ಕೆ ಕಾರಣ ಏಕೆಂದರೆ ನಾವು ಚುನಾವಣೆ ಮಾಡಲು ಪ್ರಾರಂಭಮಾಡುವಾಗ ಹೈಕೋರ್ಟಿಗೆ ಹೋಗಿ ಸ್ಟೇ ತರಲು ಪ್ರಯತ್ನ ಮಾಡಿದರು. 31—7—1962 ರಲ್ಲಿ ಅವರ ತಕರಾರು ಫೈಸಲಾಯ್ತು. ಮೊದಲು ಆಲ್ಲಿ 19,067 ಜನ ಸಂಖ್ಯೆಯಿತ್ತು, ಈಗ ಆದು 30 ಸಾವಿರಕ್ಕೇರಿದೆ. ಮೊದಲು 20 ಜನ ಸದಸ್ಯರಿದ್ದರು, ಈಗ ಜನಸಂಖ್ಯೆ ಜಾಸ್ತಿಯಾಗಿರುವುದರಿಂದ 23 ಸದಸ್ಯರನ್ನು ಚುನಾಯಿಸಬೇಕಾಗಿದೆ. 1971 ರ ಜನಗಣತಿ ಪ್ರಕಾರ ಸದಸ್ಯರ ಸಂಖ್ಯೆ ಹೆಚ್ಚಿಸಬೇಕಾಗಿದೆ. ಅದರ ಬಗ್ಗೆ ಆದೇಶ ಕೊಟ್ಟಿದ್ದೇವೆ. ತಕ್ಷಣ ಅಲ್ಲಿ ಚುನಾವಣೆ ನಡೆಸುವಂತೆ ಡೆಪ್ಯೂಟಿಕಮಿಷನರಿಗೆ ತಿಳಿಸಲಾಗಿದೆ. ಚುನಾವಣೆ ನಡೆಯುವುದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—1971ರ ಜನಗಣತಿ ಪ್ರಕಾರ ಕ್ಷೇತ್ರ ವಿಂಗಡಣೆ ಇನ್ನೂ ಆಗಿಲ್ಲ. 1972 ರಲ್ಲೇ ಹೈಕೋರ್ಟಿನ ತೀರ್ಮಾನವಾಗಿದ್ದರೂ ಕ್ಷೇತ್ರ ವಿಂಗಡಣೆ ಮಾಡಿಲ್ಲ. ಯಾವಾಗ ಕ್ಷೇತ್ರ ವಿಂಗಡಣೆ ಮಾಡಿ ಚುನಾವಣೆ ಮಾಡಲಾಗುವುದು ?

ಶ್ರೀ ಬಿ. ಬಸವಲಿಂಗಪ್ಪ.—ಇದರ ಬಗ್ಗೆ ಇಷ್ಟು ಅಶ್ವಾಸನೆ ಕೊಡಬಹುದು. ಡೆಪ್ಯೂಟಿ ಕಮೀಷನರಿಗೆ ಈ ದಿವಸ ನಿರ್ದೇಶ ಕಳುಹಿಸಿ ಅತಿ ಜಾಗ್ರತೆಯಾಗಿ ಚುನಾವಣೆ ನಡೆಸುವಂತೆ ಕ್ರಮ ತೆಗೆದುಕೊಳ್ಳುತ್ತೇವೆ.

Promotion of Clerks Working in the Tahsildars Offices of Bangalore District

737. Sri B. PUTTASWAMAIAH (Ramangaram).—

Will the Minister for Revenue be pleaced to state :—

(*a*) the number of clerks of class III cadre working in the Offices of the Tahsildars of Bangalore District ;

(*a*) the number of Tahsildars who have recommended the names of clerks of class III cadre for promotions from the year 1967 to 1969 ;

(*c*) the number of Officials so recommended out of them, the number and the basis on which they were promoted (from 1968 to 1970) ;